ಇದರ ಅರ್ಥ,

"ಮಳೆಯನ್ನು ಕೊಡು ನಮ್ಮ ನೆಂಟ ಗುಡುಗೇ,
ನೀರಿಗಾಗಿ ಬಾಯಾರಿದ್ದೇವೆ ನಾವು,
ಮಳೆಯನ್ನು ಕೊಡು ನಮ್ಮ ನೆಂಟ ಗುಡುಗೇ."

ತಮ್ಮ ಒಣಗಿದ ಗಂಟಲು ಸಾಧ್ಯವಾಗಿಸಿದಂತೆ ಇಬ್ಬರೂ ಇದನ್ನೇ ಹಾಡಿದರು. ಸುಸ್ತಾಗಿ, ಹತಾಶರಾದ ಅವರು ಇನ್ನು ಸಾಯುವುದೇ ಲೇಸು ಎಂದು ಮಲಗಿದರು. ಒಬ್ಬ ಬುಲೈ ಹೇಳಿದಳು,

"ಮಳೆ ಬಹಳ ತಡವಾಗಿ ಬರುತ್ತದೆ. ಆದರೆ, ಖಂಡಿತ ಬಂದೇ ಬರುತ್ತದೆ. ಗಿಡ್ಯಾದ ವಾಸನೆ ಬಲವಾಗಿದೆ."



"ಹೌದು ತುಂಬಾ ಬಲವಾಗಿದೆ." ಮತ್ತೊಬ್ಬಳು ಉತ್ತರಿಸಿದಳು. ಆದರೆ, ಆಗ ಮೂಡಿದ ಮಳೆಬರುವ ಚಿಹ್ನೆ ಕೂಡ ಅವರಿಗೆ ಉತ್ಸಾಹ ತರಲಿಲ್ಲ. ಅದು ಬರುವುದು ನಿಜ, ಆದರೆ ಬಲು ತಡವಾಗಿ ಎಂಬ ಭಾವನೆ ಬೇರೂರಿತು. ಆಗಲೇ ಉತ್ತರ ದಿಕ್ಕಿನಲ್ಲಿ ಕಪ್ಪು ಮೋಡ ಕೂಡುತ್ತಿತ್ತು. ಅದು ಕೂಡಲೇ ಹರಿದು ಇವರತ್ತ ಬರಲಾರಂಭಿಸಿತು. ಹೀಗೆ ಬರುತ್ತಾ ಅದು ಆಗಾಗ್ಗೆ ಗುಡುಗಿ ತನ್ನ ಆಗಮನವನ್ನು ಸೂಚಿಸುತ್ತಿತ್ತು. ಬಂದ ಕಾರ್ಮೋಡ ಬುಲೈ ಬುಲೈ ಅವರಿದ್ದ ಬಯಲ ಮೇಲೆಯೇ ಬಂದು ನಿಂತಿತು. ಮತ್ತೊಂದು ಗುಡುಗು. ಮೋಡ ಒಡೆದು ದಪ್ಪ ಹನಿಗಳು ಬೀಳಲಾರಂಭಿಸಿದವು. ಮೆಲ್ಲಗೆ ಬೀಳುತ್ತಿದ ಮಳೆ ಜೋರಾಗಿ ಸುರಿಯಲಾರಂಭಿಸಿತು. ಮೋಡ ಬರಿದಾಗಿ ಬಯಲಿನಲ್ಲಿದ್ದ ಗಿಲ್ಗೈ(ಹಳ್ಳ)ಗಳೆಲ್ಲಾ ತುಂಬಿ ಹೋದವು.

ಕಾದು ಸುಸ್ತಾಗಿದ್ದ ಅವರ ದೇಹಗಳ ಮೇಲೆ ತಣ್ಣೀರು ಬಿದ್ದದ್ದು ಬುಲೈ ಬುಲೈ ಮತ್ತು ವೀಡಾ ಅವರಿಗೆ ಬಲು ಹಿತವಾಯಿತು. ಎಲ್ಲರೂ ಗಿಲ್ಗೈ ಹಳ್ಳಗಳತ್ತ ಓಡಿದರು. ತಮ್ಮ ತಲೆಗಳನ್ನು ಹಳ್ಳಗಳಲ್ಲಿ ತೂರಿಸಿ ಮನಸಾರೆ ನೀರು ಕುಡಿದು ಬಾಯಾರಿಕೆಯನ್ನು ನೀಗಿಸಿಕೊಂಡರು.

ವೀಡಾ ಹೇಳಿದ, "ನಾನು ಆಗಲೇ ಹೇಳಿದ್ದೆ ನಿಮಗೆ, ಇಲ್ಲಿ ನೀರಿದೆ ಅಂತ. ನಾನು ಹೇಳಿದ್ದು ಸರಿಯಾಗಿತ್ತು".

"ಸುಮ್ಮನಿರು. ನೀನು ಹೇಳಿದ ಕಡೆ ನೀರೂ ಇರಲಿಲ್ಲ, ಏನೂ ಇರಲಿಲ್ಲ. ನಮ್ಮ ಬಂಧು ಡೂಲೂಮೈ ನಮ್ಮ ಹಾಡನ್ನು ಕೇಳಿಸಿಕೊಳ್ಳದೆ ಹೋಗಿದ್ದರೆ ಯಾವ ನೀರೂ ಇರುತ್ತಿರಲಿಲ್ಲ. ನಾವು ಸತ್ತು ಹೋಗುತ್ತಿದ್ದೆವು. ನೀನು ಕೂಡ."

ಬುಲೈ ಬುಲೈ ಅವರಿಗೆ ಸಿಟ್ಟುಬಂದಿತ್ತು. ಇದನ್ನರಿತ ವೀಡಾ ಕೆಲವು ಬೇರುಗಳನ್ನು ಅಗೆದು ತಂದ. ಎಲ್ಲರೂ ಅದನ್ನು ತಿಂದು ತಮ್ಮ ಕೋಪವನ್ನು ಮರೆತರು. ಊಟ ಮುಗಿಸಿ ಮೂವರೂ ಮಲಗಿದರು.

ಎದ್ದು ಮತ್ತೆ ಮೂವರೂ ತಮ್ಮ ಪ್ರಯಾಣವನ್ನು ಮುಂದುವರೆಸಿದರು. ಮತ್ತೆ ಅದೇ ತರಹದ